ಓ.ಎಸ್. ನಂಬರ:-41/2022

ಡಿ.ಡಬ್ಲೂ -:-4 : ಮಾಳಪ್ಪ ತಂದೆ ಗುರಪ್ಪ ಚಿಂಚೋಳಿ

ದಿನಾಂಕ:- 02-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

***ಮುಖ್ಯ ವಿಚಾರಣೆ:** ಶ್ರೀ. ಎಸ್ ಎಸ್ ಪಿ ವಕೀಲರಿಂದ :-*

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ ಅದರಲ್ಲಿ ಬರೆಯಲಾಗಿರುವ ಎಲ್ಲಾ ಅಂಶಗಳು ನನಗೆ ತಿಳಿದಿದ್ದು, ಸತ್ಯಾಂಶಗಳಿಂದ ಕೂಡಿರುತ್ತವೆ. ನಾನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ.

ಸಾಕ್ಷಿ ನಿಡಿ-೧ ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ-೧ [ಬಿ] ಎಂದು ಗುರುತಿಸಲಾಯಿತು.

ಪಾಟೀ ಸವಾಲು : ವಾದಿ ಪರ ವಕೀಲರಾದ ಶ್ರೀ ಎಸ್ ಜೆ ಜಿ ವಕೀಲರಿಂದ.

ಅಣ್ಣಾರಾವ್ ರವರಿಗೆ ದತ್ತಣ್ಣಗೌಡ, ಈರಣ್ಣಗೌಡ, ಶಿವಲಿಂಗಗೌಡ ಮತ್ತು ಇನ್ನೊಬ್ಬ ಮಗ ಒಟ್ಟು ೪ ಜನ ಗಂಡು ಮಕ್ಕಳು ಇದ್ದರು. ಇನ್ನೊಬ್ಬ ಮಗ ಎಲ್ಲಿಗೊ ಹೋಗಿದ್ದು, ಅವರ ಹೆಸರು ನನಗೆ ಗೊತ್ತಿಲ್ಲ. ಅಣ್ಣಾರಾವ್ ರವರಿಗೆ ಜಗದೇವಿ ಮತ್ತು ದೊಡ್ಡಮ್ಮ ಎಂಬ ೨ ಜನ ಹೆಣ್ಣುಮಕ್ಕಳಿರುತ್ತಾರೆ.

೨ನೇ ಪ್ರತಿವಾದಿ ದತ್ತಣ್ಣ ನನ್ನನ್ನು ಈ ದಿನ ಸಾಕ್ಷ್ಯ ನುಡಿಯಲು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ಜಮೀನಿನ ಸರ್ವೆ ನಂಬರ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ೨೦೨೧ ರಲ್ಲಿ ೮ ಎಕರೆ ಜಮೀನಿನ ಕುರಿತು ನಾನು ಸಹಿ ಮಾಡಿರುತ್ತೇನೆ. ನಾನು ೨ನೇ ಪ್ರತಿವಾದಿ ದತ್ತಣ್ಣಗೌಡರವರ ಮನೆಯಲ್ಲಿ ಸಹಿ ಮಾಡಿರುತ್ತೇನೆ. ನನಗೆ ಈ ದಾವೆಯ ಕುರಿತು ಯಾವುದೆ ಮಾಹಿತಿ ಇರದೆ ಇದ್ದರೂ ೨ನೇ ಪ್ರತಿವಾದಿಯ ಮಾತುಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.